# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ಕಾರಿ ಆರ್.ಸಿ. ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು ಈ ಸಂಸ್ಥೆಯ ಕೋರ್ಸ್ ಟೈಟಲ್ ಆದ "Diploma in Business Administration" ಅನ್ನು " Modern Office Management ಎಂದು ಬದಲಾಯಿಸುವ ಬಗ್ಗೆ-

ಓದಲಾಗಿದೆ:-

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 23 ಡಿವಿಪಿ (2) 2013, ದಿ:16-05-2015.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 37 ಎಂಪಿಐ 1975, ದಿನಾಂಕ:25-09-1975.

ಪ್ರಸ್ತಾವನೆ:-

ಮೇಲೆ ಓದಲಾಧ ಕ್ರ.ಸಂ (1)ರ ಪತ್ರದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರು ಮೇಲೆ ಓದಲಾದ ಕ್ರ.ಸಂ.(2)ರ ಸರ್ಕಾರಿ ಆದೇಶದಲ್ಲಿ ಬೆಂಗಳೂರಿನ ಸರ್ಕಾರಿ ಆರ್.ಸಿ. ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಎಸ್.ಜೆ.ಪಾಲಿಟೆಕ್ನಿಕ್, ಆವರಣ, ಬೆಂಗಳೂರು ಈ ಸಂಸ್ಥೆಯಲ್ಲಿ ಎರಡು ವರ್ಷಗಳ ಪದವಿ ಪೂರ್ವ ವ್ಯಾಸಂಗ ಮುಗಿಸಿರುವ ವಿದ್ಯಾರ್ಥಿಗಳಿಗೆ ಆಫ್‌ಲೈನ್ ಪ್ರವೇಶಗಳನ್ನು ಪಡೆಯಲು ಅವಕಾಶ ಮಾಡಿಕೊಟ್ಟಿದ್ದು, ಈ ಸಂಸ್ಥೆಯಲ್ಲಿ 03 ವರ್ಷಗಳ "Diploma in Business Administration" ಕೋರ್ಸನ್ನು ಬೋಧಿಸಲಾಗುತ್ತಿತ್ತು. ಸದರಿ ಕೋರ್ಸಿನ ಪ್ರವೇಶ ಸಂಖ್ಯೆಯು 60 ಇದ್ದು, ಕಾಲಾನಂತರದಲ್ಲಿ ಈ ಕೋರ್ಸಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಗಣನೀಯ ಪ್ರಮಾಣದಲ್ಲಿ ಕ್ಷೀಣಿಸುತ್ತಾ ಬಂದಿದ್ದ ಹಿನ್ನೆಲೆಯಲ್ಲಿ, ಸದರಿ ಕೋರ್ಸಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸಲುವಾಗಿ ಸದರಿ ಕೋರ್ಸಿನ ಪ್ರವೇಶ ಅರ್ಹತೆಯನ್ನು ಪಿ.ಯು.ಸಿ ಗೆ ಬದಲಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಗೆ ಮಾರ್ಪಡಿಸಿ ಮತ್ತು ಸದರಿ ಕೋರ್ಸಿನ ಪಠ್ಯಕ್ರಮ ಪರಿಷ್ಕರಣೆ ಮತ್ತು ಕೋರ್ಸ್ ಟೈಟಲ್ ಆದ "Diploma in Business Administration" ಅನ್ನು " Modern Office Management" ಎಂದು ಪದನಾಮ ಬದಲಾಯಿಸಲು ಎಐಸಿಟಿಇ ಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಎಐಸಿಟಿಇ, ನವದೆಹಲಿ ಇವರು ಅನುಮೋದನೆ ನೀಡಿರುವುದರಿಂದ ಈ ಬಗ್ಗೆ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಮತ್ತು ಈ ಕೋರ್ಸಿಗೆ 2015-16ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪ್ರಕ್ರಿಯೆಯನ್ನು ನೋಡಲ್ ಸೆಂಟರ್ ಮುಖಾಂತರ ನಡೆಸಲು ಕೂಡ ಸರ್ಕಾರದ ಆದೇಶ ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಹಿನ್ನೆಲೆಯಲ್ಲಿ, ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 164 ಟಿಪಿಇ 2015.**

**ಬೆಂಗಳೂರು, ದಿನಾಂಕ:23ನೇ ಜುಲೈ 2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆರ್.ಸಿ. ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು ಈ ಸಂಸ್ಥೆಯು ನಡೆಸುತ್ತಿರುವ ಕೋರ್ಸ್ ಆದ "Diploma in

Business Administration" ಪದನಾಮವನ್ನು "Modern Office Management ಎಂದು ಬದಲಾಯಿಸಲು ಹಾಗೂ ಸದರಿ ಕೋರ್ಸಿಗೆ ನಿಗಧಿಪಡಿಸಿದ್ದ ಪಿ.ಯು.ಸಿ ವಿದ್ಯಾರ್ಹತೆಗೆ ಬದಲಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯನ್ನು ನಿಗಧಿಪಡಿಸಿ ಮತ್ತು ಈ ಕೋರ್ಸಿಗೆ 2015-16ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪ್ರಕ್ರಿಯೆಯನ್ನು ನೋಡಲ್ ಸೆಂಟರ್ ಮುಖಾಂತರ ನಡೆಸಲು ಸರ್ಕಾರವು ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

23/7/15

(ಬಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:

1. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
2. ಕಾರ್ಯದರ್ಶಿಗಳು, ಕರ್ನಾಟಕ ಪರೀಕ್ಷಾ ಮಂಡಳ, ಬೆಂಗಳೂರು
3. ಪ್ರಾಂಶುಪಾಲರು, ಸರ್ಕಾರಿ ಆರ್.ಸಿ. ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, 2ನೇ ಮಹಡಿ, ಸಿ.ವಿ.ರಾಮನ್ ಬ್ಲಾಕ್, ಸರ್ಕಾರಿ ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು
4. ಸರ್ಕಾರದ ಉಪ ಕಾರ್ಯದರ್ಶಿ, ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ
5. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು

---3---

ಹಿಂಬರಹ ಸಂಖ್ಯೆ: ಡಿಟಿಇ 27 ಡಿವಿಪಿ(2) 2014 ದಿನಾಂಕ: 27/07/2015.

ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಈ ಕೆಳಕಂಡ ಅಧಿಕಾರಿಗಳಿಗೆ ಹಾಗೂ ವಿಭಾಗಗಳಿಗೆ ಕಳುಹಿಸಲಾಗಿದೆ.

01. ಪ್ರಿನ್ಸಿಪಾಲರು, ಸರ್ಕಾರಿ ಆರ್.ಸಿ. ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, 2ನೇ ಮಹಡಿ, ಸಿ.ವಿ.ರಾಮನ್ ಬ್ಲಾಕ್, ಸರ್ಕಾರಿ ಎಸ್.ಜೆ. ಪಾಲಿಟೆಕ್ನಿಕ್ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು.
02. ಜಂಟಿ ನಿರ್ದೇಶಕರು (ಆಡಳಿತ/ಪರೀಕ್ಷೆ/ತನಿಖೆ/ಎಟಿಎಸ್)
03. ಉಪ ನಿರ್ದೇಶಕರು (ಯೋಜನೆ/ಪರೀಕ್ಷೆ/ತನಿಖೆ)
04. ಸಹಾಯಕ ನಿರ್ದೇಶಕರು (ಯೋಜನೆ/ಪರೀಕ್ಷೆ/ತನಿಖೆ/ಎಂಪಿಸಿ)
05. ಸಂಖ್ಯಾಧಿಕಾರಿಗಳಿಗೆ
06. ಆಡಳಿತಾಧಿಕಾರಿಗಳಿಗೆ
07. ರಿಜಿಸ್ಟ್ರಾರ್ (ಪರೀಕ್ಷೆ/ಎಸಿಎಂ)
08. ಅಧೀಕ್ಷಕರು, ಎಸಿಎಂ ವಿಭಾಗ
09. ಕಾರ್ಯನಿರ್ವಾಹಕರು, ಎಸಿಎಂ(2) ವಿಭಾಗ
10. ಸರ್ಕಾರಿ ಆದೇಶಗಳ ಕಡತಕ್ಕೆ
11. ಈ ಗೌರ್‌ನೆನ್ಸ್ ಸೆಲ್‌ಗೆ
12. ಕಾರ್ಯನಿರ್ವಾಹಕರು - ಡಿವಿಪಿ (1) ವಿಭಾಗ.

ಜಂಟಿ ನಿರ್ದೇಶಕರು (ಎಟಿಎಸ್)
27/7/2015